1931ರ ನಂತರ 94 ವರ್ಷಗಳ ಬಳಿಕ ನಡೆಸುತ್ತಿರುವ ಈ ಸಮೀಕ್ಷೆ ಹಿಂದುಳಿದ ವರ್ಗಗಳಿಗೆ ಮಹತ್ವದ್ದಾಗಿದೆ. ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳಲು, ವಿಶೇಷವಾಗಿ ಶೈಕ್ಷಣಿಕ, ಔದ್ಯೋಗಿಕ ಹಾಗೂ ರಾಜಕೀಯ ಮೀಸಲಾತಿಯನ್ನು ಪಡೆದುಕೊಳ್ಳಲು ಹಿಂದುಳಿದ ಸಮಾಜಗಳು ಕಡ್ಡಾಯವಾಗಿ ಸಮೀಕ್ಷೆಯಲ್ಲಿ ಪಾಲ್ಗೊಳ್ಳಬೇಕು.
● **ಎಲ್.ಸಂದೇಶ್** ಅಧ್ಯಕ್ಷರು, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ವೇದಿಕೆ

ಸುದ್ದಿ ಸಿಂಚನ

ಗಾಂಜಾ, ಮದ್ಯ ಮಾರಾಟ: 10 ಮಂದಿ ವಿರುದ್ಧ ಪ್ರಕರಣ

ಮದ್ದೂರು: ಪಟ್ಟಣದ ಚನ್ನೇಗೌಡ ಬಡಾವಣೆ, ರಾಮ್ ರಹೀಮ್ ನಗರ ಹಾಗೂ ಕಾವೇರಿ ನಗರದಲ್ಲಿ ಅಕ್ರಮ ಗಾಂಜಾ ಮತ್ತು ಮದ್ಯ ಮಾರಾಟ ಅಂಗಡಿಗಳ ಮೇಲೆ ದಾಳಿ ನಡೆಸಿದ ಪೊಲೀಸರು 10 ಮಂದಿ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ. ಪ್ರಕರಣದಲ್ಲಿ ಎರಡು ಗಾಂಜಾ ಮಾರಾಟ ಕೇಂದ್ರ ಹಾಗೂ ಅಕ್ರಮ ಮದ್ಯ ಮಾರಾಟ ಅಂಗಡಿಗಳ ಮೇಲೆ ದಿಢೀರ್‌ದಾಳಿ ನಡೆಸಿದ ಪೊಲೀಸರು ಆರೋಪಿಗಳ ವಿರುದ್ಧ ಅಬಕಾರಿ ಕಾಯ್ದೆ ಅನ್ವಯ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ. ಈಚೆಗೆ ನಡೆದ ಶಾಂತಿ ಸಮಿತಿ ಸಭೆಯಲ್ಲಿ ಬಡಾವಣೆಗಳಲ್ಲಿ ನಡೆಯುತ್ತಿರುವ ಗಾಂಜಾ ಮತ್ತು ಅಕ್ರಮ ಮದ್ಯ ಮಾರಾಟ ಮತ್ತಿತರ ಕಾನೂನು ಭಂಗ ಚಟುವಟಿಕೆಗಳ ವಿರುದ್ಧ ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಎದುರೇ ನೇರವಾಗಿ ದೂರು ನೀಡಿದ್ದರಲ್ಲದೆ, ಅಕ್ರಮ ದಂಧೆಗಳಿಗೆ ಪೊಲೀಸ್ ಠಾಣೆ ಕೆಲವು ಸಿಬ್ಬಂದಿಗಳು ಕುಮ್ಮಕ್ಕು ನೀಡುತ್ತಿದ್ದಾರೆ ಎಂದು ಆರೋಪಿಸಿದ್ದರು. ಅಕ್ರಮಗಳಿಗೆ ಕುಮ್ಮಕ್ಕು ನೀಡುತ್ತಿರುವ ಪೊಲೀಸ್ ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಜೊತೆಗೆ ದಂಧೆಗೆ ಕಡಿವಾಣ ಹಾಕುವಂತೆ ನೇರವಾಗಿ ದೂರು ನೀಡಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಜಿಲ್ಲಾ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಅವರ ಸೂಚನೆ ಮೇರೆಗೆ ಪೊಲೀಸರು ದಾಳಿ ನಡೆಸಿ ಪ್ರಕರಣ ದಾಖಲು ಮಾಡಿಕೊಂಡಿದ್ದಾರೆ ಎಂದು ತಿಳಿದು ಬಂದಿದೆ.

ಜಲಸಂರಕ್ಷಣೆ: ಜಿಪಂಗೆ ರಾಷ್ಟ್ರೀಯ ಪ್ರಶಸ್ತಿ ಗರಿ

ಪ್ರಶಸ್ತಿಯ ಜೊತೆಗೆ 25 ಲಕ್ಷ ರು. ನಗದು ಬಹುಮಾನ | ಜಲಶಕ್ತಿ ಅಭಿಯಾನ ಚಟುವಟಿಕೆಗಳ ಯಶಸ್ವಿ ಅನುಷ್ಠಾನ

● **ಕನ್ನಡಪ್ರಭ ವಾರ್ತೆ** ಮಂಡ್ಯ

ಜಲ ಸಂರಕ್ಷಣೆ ಕಾಮಗಾರಿಗಳನ್ನು ಉತ್ತಮವಾಗಿ ಅನುಷ್ಠಾನಗೊಳಿಸಿದ್ದಕ್ಕಾಗಿ ಮಂಡ್ಯ ಜಿಲ್ಲಾ ಪಂಚಾಯ್ತಿಗೆ ರಾಷ್ಟ್ರೀಯ ಪ್ರಶಸ್ತಿ ಲಭಿಸಿದೆ. ಜಲಮೂಲಗಳ ಸಂರಕ್ಷಣೆ, ಅಂತರ್ಜಲ ವೃದ್ಧಿ ಹಾಗೂ ಕೃಷಿ ಚಟುವಟಿಕೆಗಳಿಗೆ ಅಗತ್ಯ ಪ್ರಮಾಣದ ನೀರು ಒದಗಿಸುವ ಹಾಗೂ ನೀರಿನ ಸಮಸ್ಯೆ ನಿವಾರಿಸಲು ಕೈಗೊಂಡ ಚಟುವಟಿಕೆಗಳನ್ನು ಯಶಸ್ವಿ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ್ದಕ್ಕೆ ಪ್ರಶಸ್ತಿ ಜೊತೆಗೆ 25 ಲಕ್ಷ ರು. ನಗದು ಬಹುಮಾನನೀಡಲಾಗುತ್ತಿದೆ.

ಜಲಸಂಚಾಯಿ ಜನಭಾಗಿದಾರಿ ಅಭಿಯಾನದಡಿ ರಾಜ್ಯಗಳನ್ನು 5 ವಲಯಗಳಾಗಿ ವಿಂಗಡಿಸಲಾಗಿದೆ. ಮೂರನೇ ವಲಯದಲ್ಲಿ ಆಂಧ್ರಪ್ರದೇಶ, ತೆಲಂಗಾಣ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳಿವೆ. ಈ ಪೈಕಿ ಕರ್ನಾಟಕ ರಾಜ್ಯದ 7 ಜಿಲ್ಲೆಗಳಿಗೆ ರಾಷ್ಟ್ರೀಯ ಪ್ರಶಸ್ತಿ ಘೋಷಿಸಲಾಗಿದ್ದು, ಮೈಸೂರು ವಿಭಾಗದ ಜಿಲ್ಲೆಗಳ ಪೈಕಿ ಮಂಡ್ಯ ಜಿಲ್ಲೆ ಪ್ರಥಮ ಸ್ಥಾನ ಪಡೆದಿರುವುದು ಹೆಮ್ಮೆಯ ವಿಷಯವಾಗಿದೆ.

ಜಲ ಸಂರಕ್ಷಣೆ ಹಾಗೂ ಮಳೆ ನೀರು ಸಂಗ್ರಹಣೆಯಂತಹ ಚಟುವಟಿಕೆಗಳಲ್ಲಿ ಸಮುದಾಯದಭಾಗವಹಿಸುವಿಕೆಯನ್ನುಬಲಪಡಿಸುವುದು ಅಭಿಯಾನದ ಉದ್ದೇಶ. ಜನರಿಗೆ ನೀರಿನ ಮಹತ್ವ, ನೀರಿನ ಸಂರಕ್ಷಣೆ, ವಿಧಾನಗಳ ಬಗ್ಗೆ ಅರಿವು ಮೂಡಿಸುವಲ್ಲಿ ಜಿಲ್ಲೆ ಉತ್ತಮ ಸಾಧನೆ ಮಾಡಿದೆ.

'ನೀರಿಗಾಗಿ ಒಂದಾಗಿ, ಪ್ರತಿ ಹನಿ ನೀರನ್ನು ಸಂರಕ್ಷಿಸಿ' ಎಂಬ ಧ್ಯೇಯದೊಂದಿಗೆ ಜಲಸಂಚಯ ಜನ ಭಾಗಿದಾರಿ 1.0 ಅಭಿಯಾನವು ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದು, ಮಳೆ ನೀರನ್ನು ಸಂಗ್ರಹಿಸುವುದು, ಜಲಸಂರಕ್ಷಣೆಯಸಂಸ್ಕೃತಿಯನ್ನು ಬೆಳೆಸುವುದು, ಹವಾಮಾನ ಸ್ಥಿತಿಗತಿಯನ್ನು ಉತ್ತೇಜಿಸುವುದು ಮತ್ತು ನೀರಿನ ಗುಣಮಟ್ಟವನ್ನು ಸುಧಾರಿಸುವ ಗುರಿ ಹೊಂದಿದೆ.

ನೀರಿನ ಕೊರತೆ ನಿವಾರಿಸುವುದು, ಮಳೆ ನೀರನ್ನು ಹರಿಯುವಂತೆ ಮಾಡುವುದು, ಹರಿಯುವ ನೀರನ್ನುತಡೆಯುವುದು, ತಡೆದ ನೀರನ್ನು ಇಂಗಿಸುವುದು, ಜಲ ಸಂಪನ್ಮೂಲಗಳ ಸಂರಕ್ಷಣೆ, ಮರುಸ್ಥಾಪನೆ, ಮರುಬಳಕೆಗೆ ಉತ್ತೇಜನ, ಅಮೃತ ಸರೋವರಗಳ ರಚನೆ ಮತ್ತು ನವೀಕರಣದ ಮೂಲಕ ನೀರಿನ ಸಂಗ್ರಹಣೆ ಹೆಚ್ಚಿಸುವುದು ಜಲಶಕ್ತಿ ಅಭಿಯಾನದ ಉದ್ದೇಶವಾಗಿದೆ.


ಮಳವಳ್ಳಿ ತಾಲೂಕಿನ ಬಂಡೂರು ಪಂಚಾಯಿತಿಯ ಬುಂಡೆಕಟ್ಟೆ ಕಾಮಗಾರಿ.


ಮಂಡ್ಯ ತಾಲೂಕು ಗೋಪಾಲಪುರ ಪಂಚಾಯಿತಿ ಕೆರೆ ಅಭಿವೃದ್ಧಿ ಕಾಮಗಾರಿ.



ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಇತರೆ ಯೋಜನೆಗಳಡಿ ಜಿಲ್ಲೆಯು 2024ರ ಏಪ್ರಿಲ್ 1 ರಿಂದ 2025 ರ ಮಾರ್ಚ್ 31 ರವರೆಗೆ 7,192 ಜಲಸಂರಕ್ಷಣೆ ಕಾಮಗಾರಿ ಯಶಸ್ವಿಯಾಗಿ ಪೂರ್ಣಗೊಳಿಸಿ ಜಲಸಂಚಯ ಫೋರ್ಟಲ್‌ನಲ್ಲಿ ದಾಖಲಿಸಲಾಗಿತ್ತು. ಇವುಗಳಲ್ಲಿವೈಯಕ್ತಿಕ ಮತ್ತು ಸಮುದಾಯ ಕಾಮಗಾರಿಗಳಾದ ಬದು ನಿರ್ಮಾಣ, ಬೋರ್‌ವೆಲ್ ರೀಚಾರ್ಜ್ ಪಿಟ್, ಸೋಕ್ ಪಿಟ್, ಸಮಗ್ರ ಕೆರೆ ಅಭಿವೃದ್ಧಿ, ಕಟ್ಟೆಗಳ ಅಭಿವೃದ್ಧಿ, ಕಲ್ಯಾಣಿಗಳ ಜೀರ್ಣೋದ್ಧಾರ, ಮಳೆ ನೀರು ಕೊಯ್ಲು, ತೆರೆದ ಬಾವಿ, ನಾಲಾ ಹೊಳೆತ್ತುವುದು, ಚೆಕ್ ಡ್ಯಾಂ ಕಾಮಗಾರಿಗಳು ಅನುಷ್ಠಾನಗೊಂಡಿದ್ದವು. ಈ ಕಾಮಗಾರಿಗಳನ್ನು ಕೇಂದ್ರ ನೋಡಲ್ ಅಧಿಕಾರಿಗಳ ತಂಡವು ಜಿಲ್ಲೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿತ್ತು. ಇದೀಗ ಪ್ರಶಸ್ತಿ ಲಭಿಸಿರುವುದು ಶ್ರಮಕ್ಕೆ ಸಿಕ್ಕ ಪ್ರತಿಫಲವಾಗಿದೆ.
● **ಕೆ.ಆರ್.ನಂದಿನಿ** ಸಿಇಒ, ಜಿಲ್ಲಾ ಪಂಚಾಯತ್

ಮಂಡ್ಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಹುಕೋಟಿ ಹಗರಣ

ಎಂಸಿಎಯಿಂದಲೇ ಹಣ ಲೂಟಿಗೆ ಸಹಕಾರ: ಎಂ.ಬಿ.ನಾಗಣ್ಣಗೌಡ | ಸಮಗ್ರ ತನಿಖೆಗೆ ಒತ್ತಾಯಿಸಿ ಲೋಕಾಕ್ಕೆ ದೂರು

● **ಕನ್ನಡಪ್ರಭ ವಾರ್ತೆ** ಮಂಡ್ಯ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಿದ್ಧತೆ, ನಿರ್ವಹಣೆಯಲ್ಲಿ ಬಹುಕೋಟಿ ಹಗರಣ ನಡೆಸಲಾಗಿದೆ ಎಂದು ಆರೋಪಿಸಿ ಕರುನಾಡ ಸೇವಕರು ಸಂಘಟನೆ ರಾಜ್ಯ ವಕ್ತಾರ ಎಂ.ಬಿ.ನಾಗಣ್ಣಗೌಡ ಆರೋಪಿಸಿದರು.

ಸಮ್ಮೇಳನವನ್ನು ಅಧಿಕಾರಿಗಳು, ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷರು ಹಾಗೂ ಕರ್ನಾಟಕ ಸ್ಟೇಟ್ಸ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸ್ ಲಿಮಿಟೆಡ್‌ನವರು ಭ್ರಷ್ಟಾಚಾರದ ಕೂಪವನ್ನಾಗಿಸಿದ್ದಾರೆ. ಸರ್ಕಾರದಡಿ ಸ್ಥಾಪಿತವಾಗಿರುವ ಎಂಸಿಎ ಹಣ ಲೂಟಿಗೆ ಸಹಕಾರ ನೀಡಿದೆ ಎಂದು ಆರೋಪಿಸಿ ಲೋಕಾಯುಕ್ತ ಅಧೀಕ್ಷಕರಿಗೆ ದೂರು ಸಲ್ಲಿಸಿರುವುದಾಗಿ ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜರ್ಮನ್ ಹ್ಯಾಂಗರ್ ಪೆಂಡಾಲ್‌ಗಳನ್ನು ಚದರಡಿಗೆ 30 ರು.ನಿಂದ 35 ರು.ಗಳವರೆಗೆ ಲಭ್ಯವಿದ್ದರೂ 69 ರು. ಗಳಂತೆ ಸಾಹಿತ್ಯ ಸಮ್ಮೇಳನಕ್ಕೆ ಪೂರೈಸಿದೆ. ಮಾರುಕಟ್ಟೆಯ ದುಪ್ಪಟ್ಟುದರಕ್ಕೆ ಎಂಸಿಎ ದರಗಳನ್ನು ವಿಧಿಸಿದ್ದರೂ ಅಧಿಕಾರಿಗಳು ಶಾಮೀಲಾಗಿ ಎಂಸಿಎ ದರಕ್ಕೆ ಒಪ್ಪಿ ವೇದಿಕೆ ನಿರ್ಮಾಣದ ಹೆಸರಿನಲ್ಲಿ 8.92 ಕೋಟಿ ರು. ಹಣ ವನ್ನು ಎಂಸಿಎ ವ್ಯವಸ್ಥಾಪಕನಿರ್ದೇಶಕ ಆತೀಕುಲ್ಲಾ ಶರೀಫ್‌ರವರ ಹತ್ತಿರದ ಸಂಬಂಧಿ ಎನ್ನಲಾದ ಮೈಸೂರಿನ ಶರೀಫ್ ಫರ್ನೀಚರ್‌ಗೆ ಬಿಡುಗಡೆ ಮಾಡಿದ್ದಾರೆ ಎಂದು ಆಪಾದಿಸಿದರು.

ಸಾಹಿತ್ಯ ಸಮ್ಮೇಳನದ ಬಳಿಕ ಫೆ.7ರಿಂದ ಫೆ.21ರವರೆಗೆ ಮಂಡ್ಯದಲ್ಲಿನಡೆದ ಖಾದಿ ಗ್ರಾಮೋದ್ಯೋಗ ಮಂಡಳಿ ನಡೆಸಿದ ವಸ್ತು ಪ್ರದರ್ಶನದಲ್ಲಿ ಇದೇ ಎಂಸಿಎ 15 ಸಾವಿರ ಚದರಡಿ ಜರ್ಮನ್ ಹ್ಯಾಂಗರ್ ಪೆಂಡಾಲ್‌ನ್ನು ಪ್ರತಿ ಚದರಡಿಗೆ 55 ರು.ಗಳಂತೆ ಆಳವಡಿಸಿದೆ. ಸಾಹಿತ್ಯ ಸಮ್ಮೇಳನಕ್ಕಿಂತ 14 ರು. ಕಡಿಮೆ ಮೊತ್ತ ನಮೂದಿಸಿದ್ದು, ಇದಕ್ಕಿಂತ ಕಡಿಮೆ ವೆಚ್ಚದಲ್ಲಿ ಪೆಂಡಾಲ್‌ಗಳನ್ನು ಆಳವಡಿಸುವ ವೆಂಡರ್‌ಗಳಿದ್ದರೂ ಭ್ರಷ್ಟಾಚಾರ ನಡೆಸುವ ಸಲುವಾಗಿ ದುಬಾರಿ ದರ ವಿಧಿಸಿ ವೇದಿಕೆ ನಿರ್ಮಾಣ ಹೆಸರಿನಲ್ಲಿಕೋಟಿಗಟ್ಟಲೆ ಹಣ ಲೂಟಿ ಮಾಡಲಾಗಿದೆ ಎಂದು ದೂರಿದರು.

ಸಮ್ಮೇಳನದಲ್ಲಿ ಸರಿ ಸುಮಾರು 4.69 ಲಕ್ಷ ಜನರಿಗೆ ಆಹಾರ ಸರಬರಾಜು ಮಾಡಿರುವುದಾಗಿ ಸಮಿತಿಯ ಅಧಿಕಾರಿಗಳು ಮಾಧ್ಯಮಗಳಿಗೆ ತಿಳಿಸಿದ್ದು, ವಾಸ್ತವವಾಗಿ ಆಹಾರ ಸಮಿತಿ ಮೂಲಕ 8,10,649 ಮಂದಿ ಸಮ್ಮೇಳನದಲ್ಲಿ ಆಹಾರ ಸ್ವೀಕರಿಸಿದ್ದಾರೆಂದು ನಮೂದಿಸಲಾಗಿದೆ. ಇದಕ್ಕಾಗಿ ಸ್ಕೈಬ್ಲೂ ಕಂಪನಿಗೆ 6.74 ಕೋಟಿ ರು. ಗಳನ್ನು ಪಾವತಿಸಲಾಗಿದೆ. ಸಾಹಿತ್ಯ ಸಮ್ಮೇಳನದ ಬಹುದೊಡ್ಡ ಮೊತ್ತ ಆಹಾರದ ಹೆಸರಿನಲ್ಲಿ ವ್ಯಯವಾಗಿದೆ ಎಂದು ಆರೋಪಿಸಿದರು.

ಮೊದಲನೇ ದಿನವೇ ಪೊಲೀಸರು ಮತ್ತು ಕೆಎಸ್‌ಆರ್‌ಟಿಸಿ ಸಿಬ್ಬಂದಿ ಸೇರಿ 18,480 ಮಂದಿ ಬೆಳಗಿನ ತಿಂಡಿ ಸೇವಿಸಿರುವುದಾಗಿ ದಾಖಲಿಸಿಕೊಂಡಿದ್ದಾರೆ. ವಾಸ್ತವಲದಲ್ಲಿ ಈ ಪ್ರಮಾಣದ ಸಿಬ್ಬಂದಿ ಸಮ್ಮೇಳನದ ಕೆಲಸಕ್ಕೆ ನಿಯೋಜನೆಗೊಂಡಿದ್ದರೆ ಎಂಬ ಮಾಹಿತಿ ಇಲ್ಲ. ಸಾರಿಗೆ ಸಂಸ್ಥೆ 132 ಬಸ್‌ಗಳನ್ನು ಮಾತ್ರ ಒದಗಿಸಿದ್ದು, ಹೀಗಿರುವಾಗ ಸಮಿತಿಯ ಲೆಕ್ಕಾಚಾರವೇ ಅಸ್ಪಷ್ಟವಾಗಿದೆ ಎಂದು ದೂರಿದರು.

ಸಮ್ಮೇಳನದ ಆವರಣಸ್ವಚ್ಛತೆಗಾಗಿ 1050 ಪೌರ ಕಾರ್ಮಿಕರನ್ನು ನೇಮಿಸಿಕೊಳ್ಳಲಾಗಿತ್ತು. ಅವರಿಗೆ ದಿನಕ್ಕೆ 637 ರು. ವೇತನ ನೀಡಲಾಗಿದೆ. ಸ್ವಚ್ಛತೆಗಾಗಿ 33.33 ಲಕ್ಷ ರು.ಗಳನ್ನು ಸ್ಕೈಬ್ಲೂಸಂಸ್ಥೆಗೆಬಿಡುಗಡೆಗೊಳಿಸಿದೆ. ವಾಸ್ತವದಲ್ಲಿ ಆ ಪ್ರಮಾಣದ ಪೌರ ಕಾರ್ಮಿಕರನ್ನು ಸ್ವಚ್ಛತೆಗಾಗಿ ನಿಯೋಜಿಸಿರಲಿಲ್ಲ. ಅಧಿಕಾರ ದುರ್ಬಳಕೆ ಮಾಡಿಕೊಂಡಿರುವ ಅಧಿಕಾರಿಗಳು ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಪೌರ ಕಾರ್ಮಿಕರು, ಕಸದ ವಾಹನಗಳನ್ನು ಬಳಸಿ ಸ್ವಚ್ಛಗೊಳಿಸಲಾಗಿದೆ. ಸ್ವಚ್ಛತೆ ಹೆಸರಿನಲ್ಲಿ ಸ್ಕೈಬ್ಲೂ ಸಂಸ್ಥೆ ಹಣ ಲಪಟಾಯಿಸಿದೆ ಎಂದು ಆರೋಪಿಸಿದರು.

ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸುವ ಪರಿಷತ್ತಿನ ಪದಾಧಿಕಾರಿಗಳು, ವಿದೇಶಿ ಗಣ್ಯರು, ಜನಪ್ರತಿನಿಧಿಗಳು, ಆಹ್ವಾನಿಕರು, ನೋಂದಾಯಿತ ಪ್ರತಿನಿಧಿಗಳಿಗೆ ವಸತಿ ವ್ಯವಸ್ಥೆಗಾಗಿ ಒಟ್ಟು 1.97 ಕೋಟಿ ರು. ಹಣವನ್ನು ಸ್ಕೈ ಬ್ಲೂ ಇವೆಂಟ್ ಮ್ಯಾನೇಜ್‌ಮೆಂಟ್ ಸಂಸ್ಥೆಗೆ ನೀಡಲಾಗಿದೆ. ಪ್ರವಾಸಿಗರು ಹೆಚ್ಚಿರುವ ವೇಳೆಯಲ್ಲೂ ಇರದಷ್ಟು ದುಬಾರಿದರಗಳನ್ನು ಹೋಟೆಲ್‌ಗಳಿಗೆ ಪಾವತಿ ರುವ ಬಗ್ಗೆ ದಾಖಲೆ ಸೃಷ್ಟಿಸಲಾಗಿದೆ. ಅಮರಾವತಿ ಹೋಟೆಲ್‌ನಲ್ಲಿ ಸೂಟ್ ರೂಂ ಬಾಡಿಗೆ 8454 ರು. ನೀಡಲಾಗಿದೆ. ಇಲ್ಲಿ ತಂಗಿದ್ದವರು ಸೋಫಾ ಡ್ಯಾಮೇಜ್ ಮಾಡಿದ್ದಾರೆಂದು ಅದರ ವೆಚ್ಚ 4449 ರು.ಗಳನ್ನು ಭರಿಸಲಾಗಿದೆ. ರೂಮ್‌ಗಳಲ್ಲಿ ಉಳಿದಿದ್ದವರ ಊಟದ ವೆಚ್ಚ 75956 ರು. ಭರಿಸಲಾಗಿದೆ. ವಾಸ್ತವದಲ್ಲಿ ಈ ರೂಂಗಳಲ್ಲಿ ಉಳಿದಿದ್ದ ಗಣ್ಯರು ಯಾರು ಎಂಬ ಬಗ್ಗೆ ಯಾವುದೇ ದಾಖಲೆ, ವಹಿಯನ್ನು ನಿರ್ವಹಿಸಿಲ್ಲದಿರುವುದು ಸಂಶಯಾಸ್ಪದವಾಗಿದೆ ಎಂದರು.

ಇದಲ್ಲದೇ, ಸಾಹಿತ್ಯ ಪರಿಷತ್ತಿನ ಕೇಂದ್ರ ಸಮಿತಿಯ ವೆಚ್ಚಕ್ಕಾಗಿ ಎರಡೂವರೆ ಕೋಟಿ ರು. ಹಣ ಪಡೆದಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಮಹೇಶ್ ಜೋಶಿ ಸಕಾಲಕ್ಕೆ ಲೆಕ್ಕ ಸಲ್ಲಿಸದ ಜೊತೆಗೆ ಈ ಹಗರಣಕ್ಕೆ ನೇರ ಮತ್ತು ಪರೋಕ್ಷ ಭಾಗಿದಾರರಾಗಿದ್ದಾರೆ ಎಂದು ಸ್ಪಷ್ಟಪಡಿಸಿದರು. ಗೋಷ್ಠಿಯಲ್ಲಿ ಎಚ್.ಡಿ.ಜಯರಾಂ, ಶಿವರಾಮು, ಮನು, ಮುದ್ದೇಗೌಡ, ವೆಂಕಟೇಶ್ ಇದ್ದರು.


ಮಂಡ್ಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕರುನಾಡ ಸೇವಕರು ಸಂಘಟನೆ ರಾಜ್ಯ ವಕ್ತಾರ ಎಂ.ಬಿ.ನಾಗಣ್ಣಗೌಡ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಎಂಸಿಎ ಸೂಕ್ತ ದರದಲ್ಲಿ ಸರ್ಕಾರಕ್ಕೆ ತನ್ನ ವೆಂಡರ್‌ಗಳ ಮೂಲಕ ಗುಣಾತ್ಮಕ ಸೇವೆ ಒದಗಿಸುವ ಸಲುವಾಗಿ 4 ಜೆ ವಿನಾಯ್ತಿ ನೀಡಲಾಗುತ್ತದೆ. ಆದರೆ, ಸಮಿತಿಗಳ ಸದಸ್ಯ ಕಾರ್ಯದರ್ಶಿಗಳು ಸ್ಕೈ ಬ್ಲೂನಂತಹ ಬೇನಾಮಿ ಸಂಸ್ಥೆಗಳನ್ನು ಹುಟ್ಟುಹಾಕಿ ಸರ್ಕಾರದ ಕಣ್ಣಿಗೆ ಮಣ್ಣೆರಚಿ ಕೋಟಿಗಟ್ಟಲೆ ಹಣ ಲೂಟಿ ಮಾಡಿದ್ದಾರೆ.
● **ಎಂ. ಬಿ.ನಾಗಣ್ಣಗೌಡ** ಕರುನಾಡ ಸೇವಕರು ಸಂಘಟನೆ ರಾಜ್ಯ ವಕ್ತಾರ

ಗಣತಿ ಕಾರ್ಯ ಅತಿಶೀಘ್ರ ಪೂರ್ಣಗೊಳಿಸಿದ ಶಿಕ್ಷಕರಿಗೆ ಸನ್ಮಾನ


ನಾಗಮಂಗಲ ತಾಲೂಕು ಆಡಳಿತದಿಂದ ಗಣತಿ ಕಾರ್ಯಪೂರ್ಣಗೊಳಿಸಿರುವ ಶಿಕ್ಷಕರಾದ ಹಾಲೇಶ್ ಮತ್ತು ರವಿಕುಮಾರ್ ಅವರನ್ನು ಸನ್ಮಾನಿಸಲಾಯಿತು.

● **ಕನ್ನಡಪ್ರಭ ವಾರ್ತೆ** ನಾಗಮಂಗಲ

ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ನಡೆಸುತ್ತಿರುವ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆದಾರರಾಗಿ ದಕ್ಷತೆಯಿಂದ ಕಾರ್ಯ ನಿರ್ವಹಿಸಿ ಅತಿ ಶೀಘ್ರವಾಗಿ ಗಣತಿ ಕಾರ್ಯ ಪೂರ್ಣಗೊಳಿಸಿರುವ ತಾಲೂಕಿನ ನಲ್ಕುಂದಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಎಂ.ಎನ್.ಹಾಲೇಶ್ ಮತ್ತು ಮುದಿಗೆರೆ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ರವಿಕುಮಾರ್‌ಅವರನ್ನು ತಾಲೂಕು ಆಡಳಿತದಿಂದ ಸನ್ಮಾನಿಸಲಾಯಿತು.

ಈ ವೇಳೆ ತಹಸೀಲ್ದಾರ್‌ಜಿ.ಆದರ್ಶ ಮಾತನಾಡಿ, ತಾಲೂಕಿನ ಇಬ್ಬರು ಶಿಕ್ಷಕರ ಕಾರ್ಯಕ್ಷಮತೆ ಉಳಿದೆಲ್ಲಾ ಶಿಕ್ಷಕರಿಗೆ ಪ್ರೇರಣೆಯಾಗಿ ಆದರ್ಶಪ್ರಾಯರಾಗಿದ್ದಾರೆ. ಇದೇ ರೀತಿ ಎಲ್ಲಾ ಗಣತಿದಾರರು ತಮ್ಮ ಜವಾಬ್ದಾರಿ ಅರಿತು ತ್ವರಿತಗತಿಯಲ್ಲಿ ಸಮೀಕ್ಷೆಯನ್ನು ಪೂರ್ಣಗೊಳಿಸಬೇಕು ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಲೋಕೇಶ್ ಮಾತನಾಡಿ, ಶಿಕ್ಷಕರಾದ ಹಾಲೇಶ್ ಮತ್ತು ರವಿಕುಮಾರ್‌ಅವರ ಕೆಲಸದಿಂದಾಗಿ ಶಿಕ್ಷಣ ಇಲಾಖೆ ಗೌರವ ಹೆಚ್ಚಿದೆ. ಈ ಇಬ್ಬರು ಶಿಕ್ಷಕರು ಉಳಿದ ಶಿಕ್ಷಕರಿಗೆಮಾದರಿಯಾಗಿದ್ದಾರೆ. ನಿಮ್ಮ ಕಾರ್ಯಕ್ಷಮತೆಗೆ ಇಲಾಖೆ ಮೆಚ್ಚುಗೆ ವ್ಯಕ್ತಪಡಿಸುತ್ತದೆ ಎಂದರು.

ಈ ವೇಳೆ ಕ್ಷೇತ್ರ ಸಮನ್ವಯ ಅಧಿಕಾರಿ ಕೆ. ರವೀಶ್, ಮೇಲ್ವಿಚಾರಕರಾದ ಕೆಂಪೇಗೌಡ, ಮನೋಹರ್, ತಾಂತ್ರಿಕ ಸಿಬ್ಬಂದಿ ಮುತ್ತುರಾಜ್, ಚಂದ್ರಶೇಖರ್, ರಾಘವನ್, ದರ್ಶನ್ ಉಪಸ್ಥಿತರಿದ್ದು, ಸಮೀಕ್ಷೆ ಪೂರ್ಣಗೊಳಿಸಿದ ಇಬ್ಬರು ಶಿಕ್ಷಕರನ್ನು ಅಭಿನಂದಿಸಿ ಶುಭ ಕೋರಿದರು.

ತವರಿಗೆ ಮರಳಿದ ಯೋಧನಿಗೆ ಭವ್ಯ ಸ್ವಾಗತ

● **ಕನ್ನಡಪ್ರಭ ವಾರ್ತೆ** ಮಂಡ್ಯ

ಭಾರತೀಯ ಸೇನೆಯಲ್ಲಿ 24 ವರ್ಷ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಯೋಧ ಕೆ.ಎಸ್.ಗುರುರಾಜ್ ಅವರನ್ನು ಭೀಮ ಪಡೆ ಸಂಘಟನೆ ಮುಖಂಡರು ಹಾಗೂ ಹೊನಗಾನಹಳ್ಳಿ ಮಠದ ಗ್ರಾಮಸ್ಥರು ನಗರದ ರ